ಪುಷ್ಟೀಕರಿಸುವಂತೆ ರಜಿಯಾ, 'ಜೊತೇಲಿ ಕೂರಿಸಿ ಕೌನ್ಸಿಲಿಂಗ್ ಮಾಡಾಕೆ ಅವರೇನು ಗಂಡಹೆಂಡತಿ ಏನ್ರೀ?' ಅಂತ ನನ್ನನ್ನೇ ದಬಾಯಿಸಿದರು. ನಾನು ಉತ್ತರಕೊಡದೇ ಇದ್ದುದಕ್ಕೆ ಆ ವಿಷಯ ಅಲ್ಲಿಗೇ ಮುಕ್ತಾಯವಾಯ್ತು. ಹಮೀದ್ ಎಲ್ಲವನ್ನೂ ಆಲಿಸುತ್ತ ಅಲ್ಲಿಂದ ಹೊರನಡೆದಿದ್ದ.

'ಅವನ ವಕೀಲ ಚಂದ್ರಶೇಖರ ಅಂತ ನಿಮಗೂ ಕಾಲ್ ಮಾಡಿದ್ನ ಮೇಡಂ?' ಅಂತ ಶಶಿರೇಖಾ ತಣ್ಣಗೆ ಕೇಳಿದ್ದಕ್ಕೆ, 'ಯಾಕೆ, ನಿಮಗೂ ಮಾಡಿದ್ದನೇ?' ಬೆರಗಿನ ಕಣ್ಣಲ್ಲಿ ಮರುಪ್ರಶ್ನೆ ಹಾಕಿದರು ಮೇಡಂ. 'ಹೌದು ಮೇಡಂ, ನಿನ್ನೆಯೆಲ್ಲ ಎಂಟ್ಹತ್ತು ಬಾರಿ ಫೋನು ಮಾಡಿ ತಲೆ ತಿಂದುಬಿಟ್ಟ, ಸಬೀನಾ ದೂರಿನಲ್ಲಿ ಏನೇನು ಬರೆದಿದ್ದಾಳೆ ಸ್ವಲ್ಪ ಹೇಳಿ ಪ್ಲೀಸ್. ಇದೊಂದು ಸಹಾಯ ಮಾಡಿದರೆ ನಮ್ಮ ಹಮೀದ್ ಸಾಹೇಬ್ರು ನಿಮ್ಮ ಮನೆಗೆ ವಿಶೇಷ ಕಾಣಿಕೆ ಕಳಸ್ತಾರೆ' ಅಂದ. ಅದಕ್ಕೆ ನಾನು ನಿಮ್ಮ ಈ ಮಾತು ರೆಕಾರ್ಡ್ ಆಗಿದೆ, ಅದನ್ನು ಡಿ.ಸಿ.ಯವರಿಗೆ ಕಳಸ್ತೇನೆ ಅಂದೆ. ಥಟ್ಟನೆ ಫೋನಿಟ್ಟ. ಹೆಚ್ಚಾಗಿ ಇವತ್ತು ಜೊತೆ ಬಂದವ ಆ ಲಾಯರೇ ಇರ್ಬೇಕು ಮೇಡಂ. ಡ್ರೈವರ್ ಅಂತ ಆತ ಸುಳ್ಳು ಹೇಳ್ತಿದ್ದಾನೆ' ಅಂದರು. ನಾವು ಮೂವರೂ ಕಿಟಕಿಯಿಂದ ಅವರ ಕಾರು ನಿಂತಲ್ಲಿಗೆ ನಿಸೂರ ಕಣ್ಣು ಹಾಯಿಸಿದೆವು. ನಂತರ ನಾನೇ, 'ಬಂದರೆ ಹೊರಗೆ ಇರ್ತಾರೆ ಮೇಡಂ, ನಾವು ಒಳಗೆ ಬಿಟ್ಟುಕೊಳ್ಳದೇ ಇದ್ದರಾಯ್ತು' ಅಂದೆ. 'ಅಷ್ಟೇ ಅಷ್ಟೇ' ಅಂದರು ಡೇಸಿ ಮತ್ತು ರಜಿಯಾ ಇಬ್ಬರೂ.

'ಹಮೀದ್ ಅನ್ನೋರ ಕಬ್ಬಿಣ ತಯಾರಾಗೋ ಫ್ಯಾಕ್ಟರಿಲಿ ಮೂರು ವರ್ಷದಿಂದ ಕೆಲಸ ಮಾಡ್ತಿದ್ಳಂತೆ ಇವ್ಳು, ಫ್ಯಾಕ್ಟರಿ ಮಾಲೀಕ ಹಮೀದನೇ ಮದುವೆ ಮಾಡ್ಕೋತೇನೆ ಅಂತ ತನ್ನ ನಂಬಿಸಿ ಎರಡು ವರ್ಷ ಜೊತೆಯಿದ್ದು ಈಗ ಮೋಸ ಮಾಡ್ದ ಅಂತ ಅವ್ಳು ಹೇಳೋದು. ಅವನಿಗೆ ಸುಮಾರು ನಲವತ್ತು ವರ್ಷ ಆಗಿರಬಹುದು. ಅವನಿನ್ನೂ ಮದ್ವೆ ಆಗಿಲ್ಲ, ಅನ್‌ಮ್ಯಾರೀಡ್. ಹಾಗಾಗಿ ಅವನ ಮಾತನ್ನು ನಂಬ್ದೆ, ನನಗೂ ನನ್ನ ಮಗುಗೂ ಒಂದು ಆಸ್ರೆ ಆಗ್ತದೆ ಅಂತ ಯೋಚಸ್ದೆ ಅಂತ ಬರ್ದಾಳೆ' ಡೇಸಿ ದೂರಿನ ಸಮಸ್ಯೆ ಬಿಚ್ಚಿಟ್ಟರು. 'ಗರ್ಭಿಣಿ ಆಗೇನೆ, ಈಗಾದ್ರೂ ಮದ್ವೆ ಮಾಡ್ಕೊಳಿ ಅಂತ ಕೇಳಿದ್ದಕ್ಕೆ, ನಂ ಫ್ಯಾಕ್ಟರೀ ಒಳಗಿನ ವಿಷ್ಯಾ ಹೊರಗ ಯಾಕ ಲೀಕ್ ಮಾಡ್ದಿ ಅಂತ ಇಲ್ಲದ ಅಪ್ವಾದ ಹಾಕಿ ಕಳೆದ ಮೂರು ತಿಂಗ್ಳಿಂದ ಫ್ಯಾಕ್ಟರಿಯಿಂದಾನೇ ಹೊರ್ಗೆ ಹಾಕ್ದರಂತೆ ನೋಡಿ' ಎಂದರು ರಜಿಯಾ. ಮುಂದುವರೆಸುತ್ತ ನಾನು, 'ಫ್ಯಾಕ್ಟರಿ ಕೆಲಸದಿಂದ ಯಾಕೆ ತೆಗೆದು ಹಾಕಿದ್ರಿ ಅಂತ ಕೇಳಲು ಹೋದಾಗ, ಹಮೀದನ ತಮ್ಮ ಸಲೀಮ್ ಮತ್ತು ಅವರ ಕಾರಿನ ಡ್ರೈವರ್ ಶಿವು ಸೇರಿ ತನ್ನನ್ನು ಹೊಡೆದರು ಅಂತಲೂ ಬರೆದಿದ್ದಾಳೆ' ಅಂದೆ. 'ನಂತ್ರ ನಂ ಫ್ಯಾಕ್ಟರಿ ಎದುರು ಬಂದು ಸುಸೈಡ್ ಅಟೆಂಪ್ಟ್ ಮಾಡಿದ್ಲು ಅಂತ ಹಳೇ ಹುಬ್ಳಿ ಪೊಲೀಸ್ ಠಾಣೇಲಿ ಅವ್ರೇ ಸುಳ್ಳು ಕಂಪ್ಲೆಂಟ್ ಕೊಟ್ಟು ನನ್ನ ಅರೆಸ್ಟ್ ಮಾಡ್ಸಿ, ಅಲ್ಲಿ ನಂದೇ ತಪ್ಪಿದೆ, ಇನ್ಮುಂದೆ ಹೀಂಗೆ ಮಾಡೂದಿಲ್ಲ ಅಂತ ಬರೆದ ಪತ್ರಕ್ಕೆ ಬೆದ್ರಿಸಿ ಸಹಿ ತೊಗೊಂಡ್ರು ಅಂತಲೂ ದೂರಲ್ಲಿ ಬರ್ದಾಳೆ' ಅಂದ್ರು ರಜಿಯಾ. ಇದನ್ನೆಲ್ಲ ಆಲಿಸುತ್ತಿದ್ದ ಮೇಡಂ ಬೇಸರದಿಂದ ಒಮ್ಮೆಲೇ, 'ದುಡ್ಡು ದೌಲತ್ತು ಹೀಗೆಲ್ಲ ಮಾಡಸ್ತದೆ, ಬಡವರ ಹೆಣ್ಣುಮಕ್ಕಳು ಅಂದರೆ ಸೊಳ್ಳೆಗಳು ಅಂತ ತಿಳದಾರೆ' ಅನ್ನುತ್ತ ಎದುರಿದ್ದ ಬೆಲ್ ಒತ್ತಿದರು.

ಒಳಬಂದ ಶಾಂತಮ್ಮನನ್ನು, 'ಒಳಗೆ ರೆಸ್ಟ್ ರೂಮಲ್ಲಿ ಸಬೀನಾ ಅಂತ ಕೂತಾಳೆ, ಕರೀ ಅವಳ್ನ' ಅಂದರು. ಸಬೀನಾ ಮೆಲ್ಲಗೆ ಭಯಮಿಶ್ರಿತ ಭಾವದಲ್ಲೇ ಎಂಟ್ರಿ ಕೊಟ್ಟಳು. ಹಸಿರು ಮಕಮಲ್ಲಿನ ಸೆಲ್ವಾರ್ ತೊಟ್ಟಿದ್ದಳು. ಹೊದ್ದುಕೊಂಡ ಬಿಳಿಯ ದಾವಣಿಯ ಮೇಲೆ ಎರಡು ಬಣ್ಣದ ನವಿಲುಗಳು ಎದ್ದು ಕಾಣುತ್ತಿದ್ದವು. ಒಳಬರುತ್ತಾ ನಾಲ್ವರಿಗೂ ನಮಸ್ಕಾರ ಎಂಬಂತೆ ಕೈ ಜೋಡಿಸಿದಳು. ನಾವು ಎದುರಿನ ಪ್ಲಾಸ್ಟಿಕ್ ಕುರ್ಚಿ ತೋರಿದೆವು. ನಾವೆಲ್ಲ ದೂರಿನ ಫೈಲಿನೊಳಗಿನ ಬೆಡಗಿಯನ್ನು ನಿರ್ಲಜ್ಜವಾಗಿ ಹಾಗೆ ತಿನ್ನುವಂತೆ ನೋಡುತ್ತಿದ್ದೆವೋ ಅಂತ ನನಗೇ ಅನಿಸಿ, ದೃಷ್ಟಿ ತಪ್ಪಿಸಿ ಗೋಡೆಯಲ್ಲಿದ್ದ ಬೋರ್ಡನ್ನು ದಿಟ್ಟಿಸಿದೆ. ಅಲ್ಲಿ ಈಗಾಗಲೇ ಈ ಕಚೇರಿಯಲ್ಲಿ ಕರ್ತವ್ಯ ಮುಗಿಸಿ ಹೋದ ಡಬ್ಲ್ಯು.ಡಿ.